**Misc 5/2020**
**PW-1**

ದಿನಾಂಕ:21.01.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟೀ ಸಾವಲುಃ **9** ಮತ್ತು **10**ನೇ ಎದುರುದಾರರ ಪರ ಶ್ರೀ. ಹೆಚ್ ಕೆ ವಕೀಲರಿಂದಃ</u>

ನಾನು ಕನ್ನಡ ಓದಲು ಬರುವುದಿಲ್ಲ. ನನ್ನ ಸಹಿ ಮಾಡುತ್ತೇನೆ. ನಾನು ಮತ್ತು ಉಳಿದ ಅರ್ಜಿದಾರರು ನನ್ನ ತಂದೆ ತಾಯಿ ವಿರುದ್ಧ ಆಸ್ತಿಯಲ್ಲಿ ಭಾಗ ಕೊಡುವಂತೆ ದಾವೆ ದಾಖಲಿಸಿದ್ದೇವೆ. ಅಲುಮೇಲಮ್ಮ ತೀರಿದ ನಂತರ ನಾನು ಮತ್ತು ಉಳಿದ ಅರ್ಜಿದಾರರು ನ್ಯಾಯಾಲಯಕ್ಕೆ ಬರುತ್ತಿದ್ದೇವು. ಮಾರ್ಚ್ 2020 ರಲ್ಲಿ ಕೋರಾನ ಸಂಬಂಧ ಲಾಕ್ ಡೌನ್ ಆಗಿತ್ತು ಎಂದರೇ ಆಗಿತ್ತು ಎಂದರೇ ಸರಿ. ನಾವು ಸಲ್ಲಿಸಿದ ದಾವೆ 2019 ರ ನವೆಂಬರ್ ನಲ್ಲಿ ವಜಾ ಆಗಿದೆ ಎಂದರೇ ಹೌದು. ಕೇಸ್ ವಜಾ ಆದಾಗ ಕೋರಾನ ಕಾಯಿಲೆ ಇರಲಿಲ್ಲ ಎಂದರೇ ಸಾಕ್ಷಿ ನನ್ನ ಯಜಮಾನರಿಗೆ ಹುಷಾರಿರಲಿಲ್ಲ ನಂತರ ತೀರಿಕೊಂಡರು. ಆ ಸಮಯದಲ್ಲಿ ನನ್ನ ಯಜಮಾನರಿಗೆ ಹುಷಾರಿಲ್ಲ ಎಂದು ತೋರಿಸಲು ದಾಖಲೆ ಕೊಟ್ಟಿದ್ದೇನೆ ಎಂದರೇ ಇಲ್ಲ. ಅಲುಮೇಲಮ್ಮ ನವರ ಮಕ್ಕಳು ದಾವೆಗೆ ಹಾಜರಾಗುತ್ತಿದ್ದರು.

2. ಅಲುಮೇಲಮ್ಮನವರ ಮಕ್ಕಳು ಆ ಸಮಯದಲ್ಲಿ ವಿಚಾರಣೆ ಕೊಡಬಹುದಾಗಿತ್ತು ಎಂದರೆ ಹೌದು. ನ್ಯಾಯಾಲಯ ವಿಚಾರಣೆಗೆ ಹಲವಾರು ಅವಕಾಶ ನೀಡಿದ್ದರು ನಾನು, ಅಲುಮೇಲಮ್ಮನವರ ಮಕ್ಕಳು ಹಾಗೂ ವಕೀಲರು ನ್ಯಾಯಾಲಯಕ್ಕೆ ಹಾಜರಾಗುತ್ತಿರಲಿಲ್ಲ ಎಂದರೇ ಹೌದು. ದಾವೆ ವಜಾ ಆದ ಸಮಯದಲ್ಲಿ ನಾವುಗಳು ನ್ಯಾಯಾಲಯದ ಹೊರೆಗೆ ರಾಜಿ ಮಾಡಿಕೊಂಡ ಕಾರಣ ನ್ಯಾಯಾಲಯಕ್ಕೆ ಬರುತ್ತಿಲ್ಲ ಎಂದರೇ ಸರಿಯಲ್ಲ. ಪ್ರತಿವಾದಿಗಳಿಂದ ಅನುಕೂಲ ಪಡೆದುಕೊಂಡು ನ್ಯಾಯಾಲಯಕ್ಕೆ ಬರುತ್ತಿರಲಿಲ್ಲ ಎಂದರೇ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ.

3. ಪ್ರತಿವಾದಿಗಳಿಂದ ಅನುಕೂಲ ಪಡೆದುಕೊಂಡು ಪುನಃ ಏನಾದರೂ ಸಿಗುತ್ತದೆ ಎಂದು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಇಲ್ಲ. ದಾವೆ ವಜಾ ಆದಾಗ ನನ್ನ ಯಜಮಾನರಿಗೆ ಯಾವುದೇ ಕಾಯಿಲೆ ಇರಲಿಲ್ಲ ಎಂದರೇ ಸರಿಯಲ್ಲ. ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಅರ್ಜಿ ಮತ್ತು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.